Date : 28-9-2015

# ಹಬ್ಬಗಳಿಗಾಗಿ ಬೇಡಿಕೆ ಹೆಚ್ಚಳ ಮತ್ತು ಬೇಡಿಕೆಗಿಂತ ಕಡಿಮೆ ಪೂರೈಕೆಯಿಂದ ಬೇಳೆಕಾಳು ದರ ಹೆಚ್ಚಳ

ಭಾರತದಲ್ಲಿ ಸದ್ಯ ಬೇಳೆಕಾಳು ಪೂರೈಕೆ ತುಂಬಾ ಕಡಿಮೆಯಿರುವುದರಿಂದ, ಮುಂಬರುವ ನವರಾತ್ರಿ, ದೀಪಾವಳಿ, ಕ್ರಿಸ್‌ಮಸ್ ಹಬ್ಬಗಳಿಗಾಗಿ ಬೇಡಿಕೆ ಹೆಚ್ಚಳವಾಗುತ್ತಿರುವುದರಿಂದ ಬೇಳೆಕಾಳುಗಳ ದರ ಮುಂದೆ 10–15 ಶೇಕಡಾ ಹೆಚ್ಚಳವಾಗಬಹುದೆಂದು ಅಸೆಚಾಮ್ ಹೇಳಿದೆ.

ಬೇಳೆಕಾಳು ಬೇಡಿಕೆ ಮುಂಬರುವ ನವರಾತ್ರಿ, ದೀಪಾವಳಿ ಹಬ್ಬಗಳಿಗೂ ಸಿಹಿತಿಂಡಿ ಮತ್ತಿತ್ತರ ತಿನಸು ತಯಾರಕರಿಂದ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಳ ಕಾಣಬಹುದೆನ್ನಲಾಗಿದೆ. ಬೇಡಿಕೆ ಕ್ರಿಸ್‌ಮಸ್ ಹಬ್ಬದ ತನಕ ಹೆಚ್ಚಳದಲ್ಲಿರುವ ನಿರೀಕ್ಷೆಯಿದೆ. ಇದರಿಂದ ದರ ಈಗಾಗಲೇ ಹೆಚ್ಚಳವಾಗಿದ್ದು ಪ್ರಸ್ತುತ ಕೆ.ಜಿ. ಗೆ ರೂ.90–160ರ ತನಕವಿರುವ ಬೇಳೆಕಾಳು ದರ ಇನ್ನೂ ಹೆಚ್ಚಳ ಕಾಣುವ ಸಂಭವವಿದೆ. ವಿದೇಶಗಳಿಂದ ಆಮದು ಈಗ ವಿಪರೀತ ದುಬಾರಿಯಾಗುತ್ತಿದೆ. ರಫ್ತು ಮಾಡುವ ಬೇಳೆಕಾಳು ಬೆಳೆಯುವ ಇತರ ದೇಶಗಳಲ್ಲೂ ಪೂರೈಕೆ ಕಡಿಮೆಯಾಗಿದ್ದು ದರ ಹೆಚ್ಚದಳವಾಗುತ್ತಿದೆಯೆನ್ನಲಾಗಿದೆ.

ಭಾರತ 2013–14ರಲ್ಲಿ 1.9 ಬಿಲಿಯನ್ ಅಮೇರಿಕನ್ ಡಾಲರ್ ಮೌಲ್ಯದ ಬೇಳೆಕಾಳು ಆಮದು ಮಾಡಿದೆಯೆನ್ನಲಾಗಿದೆ. 2014–15ನೇ ಸಾಲಿನ ಆಮದು ಬಿಲ್ 36.8 ಶೇಕಡಾ ಹೆಚ್ಚಳಗೊಂಡು 2.6 ಬಿಲಿಯನ್ ಅಮೇರಿಕನ್ ಡಾಲರ್ ಆಗಿದೆಯೆನ್ನಲಾಗಿದೆ. ಪ್ರಸಕ್ತ ಸಾಲಿನಲ್ಲಿ ಎಪ್ರಿಲ್‌ನಿಂದ ಜೂನ್‌ನ ವರೆಗಿನ ಆಮದು 0.66 ಬಿಲಿಯನ್ ಅಮೇರಿಕನ್ ಡಾಲರ್‌ಗಳಾಗಿವೆಯೆನ್ನಲಾಗಿದೆ.

quickmarketreports.com